## ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಸದಸ್ಯರ ಹೆಸರು | ಶ್ರೀ ಮಂಜುನಾಥ ಭಂಡಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ ) |
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 41(82) |
| ಉತ್ತರಿಸಬೇಕಾದ ದಿನಾಂಕ | 13.02.2024 |
| ಉತ್ತರಿಸಬೇಕಾದವರು | ನಗರಾಭಿವೃದ್ಧಿ ಹಾಗೂ ನಗರ ಯೋಜನೆ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ನಗರ ಮತ್ತು ಗ್ರಾಮಾಂತರ ಪ್ರದೇಶದಲ್ಲಿ ನಿವೇಶನ ಅನುಮೋದನೆಯ ನೀಡಲು ಅನುಸರಿಸುತ್ತಿರುವ ನಿಯಮಗಳು, ಕಾರ್ಯವಿಧಾನಗಳು ಮತ್ತು ಪ್ರಾಧಿಕಾರಗಳು ಯಾವುವು; (ಮಾಹಿತಿ ನೀಡುವುದು) | ಸ್ಥಳೀಯ ಯೋಜನಾ ಪ್ರದೇಶ ಘೋಷಣೆಗೊಂಡಿರುವ ಪ್ರದೇಶಗಳಿಗೆ ಸಂಬಂಧಿತ ನಗರಾಭಿವೃದ್ಧಿ/ಯೋಜನಾ ಪ್ರಾಧಿಕಾರಗಳು ಕ್ರಮವಾಗಿ ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಕಾಯ್ದೆ, 1987, ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 17 ಹಾಗೂ ಪ್ರಾಧಿಕಾರಗಳ ವಲಯ ನಿಯಮಾವಳಿಗಳನುಸಾರ ವಿನ್ಯಾಸ (ಏಕನಿವೇಶನ ಮತ್ತು ಬಹುನಿವೇಶನ) ಅನುಮೋದಿಸಲು ಕ್ರಮವಹಿಸಲಾಗುತ್ತದೆ.<br><br>ಸರ್ಕಾರದ ಆದೇಶ ಸಂಖ್ಯೆ: ನಅಇ 93 ಎಂಡಬ್ಲ್ಯೂಪಿ 2023 (ಭಾ-1), ದಿನಾಂಕ:09-01-2024 ರನ್ವಯ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ರ ಕಲಂ 4-ಕೆ ರ ಅವಕಾಶದಂತೆ ವಿನ್ಯಾಸಕ್ಕೆ ತಾಂತ್ರಿಕ ಅನುಮೋದನೆ ನೀಡಿ ಸಂಬಂಧಿತ ಸ್ಥಳೀಯ ಸಂಸ್ಥೆಯ ಮುಂದಿನ ಕ್ರಮಕ್ಕೆ ಕಳುಹಿಸಲು ಕ್ರಮವಹಿಸಲಾಗುತ್ತಿದೆ.<br><br>**ನಿವೇಶನ ಅನುಮೋದನಾ ಪ್ರಾಧಿಕಾರಗಳು**<br><br>• ಗ್ರಾಮೀಣ ಪ್ರದೇಶ – ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆಯಿಂದ ತಾಂತ್ರಿಕ ಅಭಿಪ್ರಾಯ ಹಾಗೂ ಗ್ರಾಮ ಪಂಚಾಯತಿಯಿಂದ ಅನುಮೋದನೆ ಮತ್ತು ಅಭಿವೃದ್ಧಿ. |

| | | |
|---|---|---|
| | • ನಗರಾಭಿವೃದ್ಧಿ ಪ್ರಾಧಿಕಾರ – ಪ್ರಾಧಿಕಾರದ ಸಭೆಯ ಅನುಮೋದನೆ ಪಡೆದು ಆಯುಕ್ತರು ಅನುಮೋದಿಸುತ್ತಾರೆ.<br>• ಯೋಜನಾ ಪ್ರಾಧಿಕಾರ / ಪುರಸಭೆ ಯೋಜನಾ ಪ್ರಾಧಿಕಾರ – ಪ್ರಾಧಿಕಾರದ ಸಭೆಯ ಅನುಮೋದನೆ ಪಡೆದು ಸದಸ್ಯ ಕಾರ್ಯದರ್ಶಿಗಳು ಅನುಮೋದಿಸುತ್ತಾರೆ. |
| ಆ) | ಈ ಮೊದಲು ನಿವೇಶನ ವಿನ್ಯಾಸ ಅನುಮೋದನೆಯ ಅಧಿಕಾರವನ್ನು 1-25 ಸೆಂಟ್ಸ್ ವರೆಗೆ ಗ್ರಾಮ ಪಂಚಾಯತಿಗಳಿಗೆ ಹಾಗೂ 25 ಸೆಂಟ್ಸ್-1 ಎಕರೆವರೆಗೆ ತಾಲ್ಲೂಕು ಪಂಚಾಯತಿಗಳಿಗೆ ಯಾವ ಮಾನದಂಡಗಳ ಆಧಾರದಲ್ಲಿ ನೀಡಲಾಗಿತ್ತು; | ಸರ್ಕಾರದ ಪತ್ರ ಸಂಖ್ಯೆ: ಗ್ರಾಅಪ 86 ಗ್ರಾಪಂಅ 2014, ದಿನಾಂಕ:11.11.2014 ರಲ್ಲಿ ಸ್ಥಳೀಯ ಯೋಜನಾ ಪ್ರದೇಶದ ಹೊರಭಾಗದಲ್ಲಿನ ಒಂದು ಎಕರೆಗಿಂತ ಕಡಿಮೆ ಇರುವ ಪ್ರದೇಶ ಮತ್ತು ಏಕ ನಿವೇಶನ ವಸತಿ / ವಸತಿಯೇತರಗಾಗಿ ಭೂ ಪರಿವರ್ತಿತ ಜಮೀನುಗಳಲ್ಲಿನ ವಿನ್ಯಾಸ ಅನುಮೋದನೆಯನ್ನು ಗ್ರಾಮ ಪಂಚಾಯಿತಿಗಳು ಮತ್ತು ತಾಲ್ಲೂಕು ಪಂಚಾಯತಿಗಳು ವಿನ್ಯಾಸ ಅನುಮೋದನೆ ಮಾಡಲು ಅವಕಾಶ ಕಲ್ಪಿಸಲಾಗಿದೆ.<br><br>ಸರ್ಕಾರದ ಸುತ್ತೋಲೆ ಸಂಖ್ಯೆ: ಗ್ರಾಅಪ 132 ಗ್ರಾಪಂಅ 2015, ದಿನಾಂಕ:19.03.2015 ರಲ್ಲಿ ದಕ್ಷಿಣ ಕನ್ನಡ, ಉಡುಪಿ, ಉತ್ತರ ಕನ್ನಡ ಮತ್ತು ಶಿವಮೊಗ್ಗ ಜಿಲ್ಲೆಗಳಿಗೆ ಸಂಬಂಧಿಸಿದಂತೆ ಸ್ಥಳೀಯ ಯೋಜನಾ ಪ್ರದೇಶದ ಹೊರಭಾಗದಲ್ಲಿನ ಜಮೀನಿಗೆ ವಿಸ್ತೀರ್ಣವು 1000 ಚದರ ಮೀಟರ್ (0.10 ಹೆಕ್ಟೇರ್) ಅಥವಾ ಕಡಿಮೆ ಇದ್ದಲ್ಲಿ ಏಕನಿವೇಶನ ವಸತಿ / ವಸತಿಯೇತರಗಾಗಿ ಭೂ ಪರಿವರ್ತಿತ ಜಮೀನುಗಳಲ್ಲಿನ ವಿನ್ಯಾಸ ಅನುಮೋದನೆಯನ್ನು ಗ್ರಾಮ ಪಂಚಾಯಿತಿಗಳು ಮಾಡಲು ಅಧಿಕಾರ ನೀಡಿದೆ. ಆದರೆ ಜಮೀನು ತುಂಡು ತುಂಡಾಗಿ ವಿಭಜಿಸಿ ಅನುಮೋದನೆ ಕೋರಿದರೆ ನೀಡಬಾರದಾಗಿ ತಿಳಿಸಲಾಗಿದೆ. |
| ಇ) | ಇತ್ತೀಚೆಗೆ ನಿವೇಶನ ವಿನ್ಯಾಸ ಅನುಮೋದನೆಯ ಅಧಿಕಾರವನ್ನು ಗ್ರಾಮಾಂತರ/ನಗರ ಸ್ಥಳೀಯ ಸಂಸ್ಥೆಗಳಿಂದ ನಗರಾಭಿವೃದ್ಧಿ ಇಲಾಖೆ ಹಿಂಪಡೆಯಲು | ಮಾನ್ಯ ಉಚ್ಚ ನ್ಯಾಯಾಲಯವು ರಿಟ್ ಅರ್ಜಿ ಸಂಖ್ಯೆ:19033/2023 ಕುರಿತಂತೆ ದಿನಾಂಕ:15-11-2023 ರಂದು ನೀಡಿರುವ ಆದೇಶದಲ್ಲಿ ಯೋಜನಾ ಪ್ರಾಧಿಕಾರದ ವ್ಯಾಪ್ತಿಯಲ್ಲಿ ಗ್ರಾಮ ಪಂಚಾಯತಿಯಿಂದ / ನಗರ ಸ್ಥಳೀಯ |

| | | |
|---|---|---|
| | ಕಾರಣಗಳೇನು; (ವಿವರ ನೀಡುವುದು) | ಸಂಸ್ಥೆಯಿಂದ ವಿನ್ಯಾಸ ಮಂಜೂರಾಗಿದ್ದು, ಇದು ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ರ ಕಲಂ 17 ರಲ್ಲಿ ಕಲ್ಪಿಸಿರುವ ಅವಕಾಶಕ್ಕೆ ವ್ಯತಿರಿಕ್ತವಾಗಿದ್ದು, ಈ ಅನುಮೋದನೆಗಳ ವಿರುದ್ಧ ದೂರು ಸ್ವೀಕರಿಸಿದ ಹಿನ್ನೆಲೆಯಲ್ಲಿ ವಿನ್ಯಾಸ ನಕ್ಷೆ ಮತ್ತು ಖಾತೆಗಳನ್ನು ರದ್ದುಗೊಳಿಸಿ ಆದೇಶಿಸಿದ್ದು, ಇದು ಮೂರನೇ ವ್ಯಕ್ತಿಯ ಖರೀದಿದಾರರ ಹಿತಾಸಕ್ತಿಗಳನ್ನು ಒಳಗೊಂಡಿದ್ದು, ಅನಾವಶ್ಯಕ ವಿವಾದಗಳಿಗೆ ಕಾರಣವಾಗಿರುವುದರಿಂದ ಇಂತಹ ಸಮಸ್ಯೆಗಳನ್ನು ನಿಯಂತ್ರಿಸಲು ರೂಪುರೇಷೆಗಳನ್ನು ರಚಿಸಲು ಮಾನ್ಯ ಉಚ್ಚ ನ್ಯಾಯಾಲಯವು ಸೂಚಿಸಿರುತ್ತದೆ.<br><br>ಸದರಿ ಆದೇಶಗಳ ಹಿನ್ನೆಲೆಯಲ್ಲಿ ಸರ್ಕಾರದ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ, ರವರ ಅಧ್ಯಕ್ಷತೆಯಲ್ಲಿ ಸಂಬಂಧಪಟ್ಟ ಇಲಾಖೆಗಳೊಂದಿಗೆ ನಡೆದ ಸಮಾಲೋಚನಾ ಸಭೆಯ ನಿರ್ಣಯದಂತೆ ಸರ್ಕಾರದ ಆದೇಶ ಸಂಖ್ಯೆ: ನಅಇ 93 ಎಂಡಬ್ಲ್ಯೂಪಿ 2023 (ಭಾ-1), ದಿನಾಂಕ:09-01-2024 ರಲ್ಲಿ ಗ್ರಾಮ ಪಂಚಾಯತಿಗಳು/ನಗರ ಸ್ಥಳೀಯ ಸಂಸ್ಥೆಗಳು ವಿನ್ಯಾಸ ಅನುಮೋದನೆ ನೀಡತಕ್ಕದ್ದಲ್ಲ ಎಂದು ಆದೇಶ ಹೊರಡಿಸಲಾಗಿರುತ್ತದೆ. |
| ಈ) | ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆಯಲ್ಲಿ ಇರುವ ಅಧಿಕಾರಿ ಸಿಬ್ಬಂದಿಗಳ ಸಂಖ್ಯೆ ಎಷ್ಟು: (ಜಿಲ್ಲಾವಾರು ಗುತ್ತಿಗೆ ಸಿಬ್ಬಂದಿಗಳ ಸಹಿತ ವಿವರ ನೀಡುವುದು) | ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆಯಲ್ಲಿ ವಿವಿಧ ವೃಂದಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿ / ನೌಕರರ ವಿವರಗಳನ್ನು ಅನುಬಂಧ-1 ರಲ್ಲಿ ಹಾಗೂ ಹೊರಗುತ್ತಿಗೆ ಆಧಾರದ ಮೇಲೆ ಈ ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳ ವಿವರವನ್ನು ಅನುಬಂಧ-2 ರಲ್ಲಿ ಲಗತ್ತಿಸಲಾಗಿದೆ. |
| ಉ) | ಜಿಲ್ಲಾ ಕೇಂದ್ರಗಳಲ್ಲಿರುವ ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆಯಲ್ಲಿ ಇರುವ ಕಡಿಮೆ ಅಧಿಕಾರಿ/ಸಿಬ್ಬಂದಿಗಳ ಮೂಲಕ ಜಿಲ್ಲೆಯ ನಿವೇಶನ ವಿನ್ಯಾಸ ಬಡಾವಣೆ ನಕ್ಷೆ ಅನುಮೋದನೆ ಮಾಡಲು ವಾಸ್ತವವಾಗಿ | ಈ ಇಲಾಖೆಯಲ್ಲಿ ಖಾಲಿ ಇರುವ 19 ನಗರ ಯೋಜಕರ ಹುದ್ದೆಗಳನ್ನು ನೇರ ನೇಮಕಾತಿಯಿಂದ ಭರ್ತಿ ಮಾಡಲು ಕರ್ನಾಟಕ ಲೋಕ ಸೇವಾ ಆಯೋಗದ ಅಧಿಸೂಚನೆ ದಿ:31-01-2024 ರಲ್ಲಿ ಅಭ್ಯರ್ಥಿಗಳ ಅಂತಿಮ ಆಯ್ಕೆ ಪಟ್ಟಿ ಪ್ರಕಟಿಸಲಾಗಿದೆ. |

| | | |
|---|---|---|
| | ಸಾಧ್ಯವಿದೆಯೇ; (ವಿವರ ನೀಡುವುದು) | 60 ಸಹಾಯಕ ನಗರ ಯೋಜಕರ ಹುದ್ದೆಗಳನ್ನು ನೇರ ನೇಮಕಾತಿಯಿಂದ ಭರ್ತಿ ಮಾಡಲು ಕರ್ನಾಟಕ ಲೋಕ ಸೇವಾ ಆಯೋಗದ ಅಧಿಸೂಚನೆ ದಿ:22-01-2024 ರಲ್ಲಿ ತಾತ್ಕಾಲಿಕ ಆಯ್ಕೆ ಪಟ್ಟಿ ಪ್ರಕಟಿಸಲಾಗಿದ್ದು, ಸದರಿ ಹುದ್ದೆಗಳ ನೇಮಕಾತಿ ಪ್ರಕ್ರಿಯೆ ಚಾಲ್ತಿಯಲ್ಲಿದೆ.<br><br>ಸರ್ಕಾರದ ಪತ್ರ ಸಂ: ನಅಇ/236/ನಯೋಸೇ/2015, ದಿ: 12-01-2024 ರಲ್ಲಿ ಈ ಇಲಾಖೆಯಲ್ಲಿ ಖಾಲಿ ಇರುವ ಕೆಳಕಂಡ ವಿವಿಧ ಹುದ್ದೆಗಳನ್ನು ನೇರ ನೇಮಕಾತಿಯಿಂದ ಭರ್ತಿ ಮಾಡಿಕೊಳ್ಳಲು ಅನುಮತಿ ನೀಡಲಾಗಿದೆ.<br>1. ನಗರ ಮತ್ತು ಗ್ರಾಮಾಂತರ ಯೋಜನಾ ಸಹಾಯಕ ನಿರ್ದೇಶಕರು - 05 ಹುದ್ದೆಗಳು<br>2. ನಗರ ಯೋಜಕರು – 10 ಹುದ್ದೆಗಳು<br>3. ಸಹಾಯಕ ನಗರ ಯೋಜಕರು – 40 ಹುದ್ದೆಗಳು<br><br>ಸದರಿ ಹುದ್ದೆಗಳ ಭರ್ತಿಗೆ ಕ್ರಮವಹಿಸಲಾಗುತ್ತಿದ್ದು, ಪ್ರಸ್ತುತ ಈ ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿ / ಸಿಬ್ಬಂದಿಯ ಸೇವೆಯನ್ನು ಉಪಯೋಗಿಸಿಕೊಂಡು ಇಲಾಖೆಯ ಕೆಲಸ ಕಾರ್ಯಗಳನ್ನು ನಿರ್ವಹಿಸಲಾಗುತ್ತಿದೆ. ಮೇಲ್ಕಂಡಂತೆ ಅಧಿಕಾರಿ/ಸಿಬ್ಬಂದಿಗಳ ನೇಮಕಾತಿಗೆ ಕ್ರಮವಹಿಸಲಾಗುತ್ತಿರುವುದರಿಂದ ಸಾಕಷ್ಟು ಅಧಿಕಾರಿ/ಸಿಬ್ಬಂದಿಗಳು ಲಭ್ಯವಾಗುವುದರಿಂದ ವಿನ್ಯಾಸ ನಕ್ಷೆ ಅನುಮೋದನೆ ನೀಡಲು ಯಾವುದೇ ತೊಂದರೆಗಳುಂಟಾಗುವುದಿಲ್ಲ. |
| ಊ) | ದಕ್ಷಿಣ ಕನ್ನಡ ಮತ್ತು ಉಡುಪಿಯಲ್ಲಿ ಕಂದಾಯ ಇಲಾಖೆಯ ಫಾರ್ಮ ಹೌಸ್, ಈ ಮೊದಲು ನೀಡಿದ ಹಕ್ಕುಪತ್ರ ನಿವೇಶನಗಳು, ಕೃಷಿ ಜಾಗದ ಮಧ್ಯೆ ಇರುವ, ಖಾಸಗಿ ಜಾಗದ ರಸ್ತೆ ಸಂಪರ್ಕವಿರುವ, 94ಸಿ 94ಸಿಸಿ ಅರಣ್ಯ ಹಕ್ಕು ಕಾಯ್ದೆಯಡಿ ನೀಡಿದ, ರಸ್ತೆ | ಪ್ರಾಧಿಕಾರಗಳಲ್ಲಿ ಅನುಮೋದಿತ ವಲಯ ನಿಯಮಾವಳಿಗಳಲ್ಲಿರುವ ಅವಕಾಶದಂತೆ ಹಾಗೂ ಸ್ಥಳೀಯ ಯೋಜನಾ ಪ್ರದೇಶ ಘೋಷಣೆಗೊಂಡಿಲ್ಲದೇ ಇರುವ ಇತರೆ ಪ್ರದೇಶಗಳಲ್ಲಿ ಭೂ ಪರಿವರ್ತನೆಯಾದ ಜಮೀನುಗಳಿಗೆ ಮಾತ್ರ ವಿನ್ಯಾಸ ಅನುಮೋದನೆ ನೀಡಲಾಗುತ್ತದೆ. |

| | | |
|---|---|---|
| | ಅಂಚಿನಲ್ಲಿರುವ, ಪರಿಗಣಿತ ಅರಣ್ಯ ವ್ಯಾಪ್ತಿಯೊಳಗಿನ ಸಿ.ಆರ್.ಝಡ್ ವ್ಯಾಪ್ತಿಯ ರಾಷ್ಟ್ರೀಯ, ರಾಷ್ಟ್ರೀಯ ಉದ್ಯಾನ/ಅಭಯಾರಣ್ಯ ವ್ಯಾಪ್ತಿಯ ನಿವೇಶನಗಳಿದ್ದು, ಈ ನಿವೇಶನಗಳ ಬಡಾವಣೆ ನಕ್ಷೆ ಅನುಮೋದನೆಗೆ ಯಾವ ನಿಯಮಗಳನ್ನು ಅನುಸರಿಸಲಾಗುತ್ತಿದೆ? (ವಿವರ ನೀಡುವುದು) | ಭೂ ಪರಿವರ್ತಿತ ಜಮೀನುಗಳಿಗೆ ಸಾರ್ವಜನಿಕ ರಸ್ತೆ ಸಂಪರ್ಕವಿದ್ದಲ್ಲಿ ಹಾಗೂ ಜಮೀನುಗಳು ಅರಣ್ಯ, ಸಿ.ಆರ್.ಝಡ್ Eco-sensitive ವ್ಯಾಪ್ತಿಯಲ್ಲಿದ್ದಲ್ಲಿ ಸಂಬಂಧಪಟ್ಟ ಇಲಾಖೆಗಳಿಂದ ನಿರಾಕ್ಷೇಪಣಾ ಪತ್ರ ಪಡೆದು ಬಡಾವಣೆ ಅನುಮೋದನೆಗೆ ಕ್ರಮವಹಿಸಲಾಗುತ್ತಿದೆ. |

ಸಂಖ್ಯೆ : ನಅಇ 55 ಮೈಅಪ್ರಾ 2024

12/02/2024

(ಬಿ.ಎಸ್ ಸುರೇಶ)
ನಗರಾಭಿವೃದ್ಧಿ ಮತ್ತು ನಗರ
ಯೋಜನೆ ಸಚಿವರು

## ಅನುಬಂಧ-1

## ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಜಿಲ್ಲಾವಾರು ಅಧಿಕಾರಿ/ಸಿಬ್ಬಂದಿಗಳ ವಿವರ

| ಕ್ರ.ಸಂ. | ಕಛೇರಿಗಳ ಹೆಸರು | ಗ್ರೂಪ್-ಎ | ಗ್ರೂಪ್-ಬಿ | ಗ್ರೂಪ್-ಸಿ | ಗ್ರೂಪ್-ಡಿ | ಒಟ್ಟು |
|---|---|---|---|---|---|---|
| 1 | ಬೆಂಗಳೂರು | 84 | 36 | 21 | 06 | 147 |
| 2 | ಬೆಂಗಳೂರು ಗ್ರಾಮಾಂತರ | 10 | 5 | 1 | - | 16 |
| 3 | ಕೋಲಾರ | 4 | 1 | - | - | 5 |
| 4 | ಶಿವಮೊಗ್ಗ | 4 | 2 | 3 | - | 9 |
| 5 | ತುಮಕೂರು | 5 | 5 | 1 | - | 11 |
| 6 | ಚಿಕ್ಕಬಳ್ಳಾಪುರ | 5 | 2 | 2 | - | 9 |
| 7 | ದಾವಣಗೆರೆ | 3 | 3 | 1 | - | 7 |
| 8 | ಚಿತ್ರದುರ್ಗ | 1 | 2 | 1 | - | 4 |
| 9 | ಮೈಸೂರು | 12 | 8 | 4 | 3 | 27 |
| 10 | ಮಂಡ್ಯ | 2 | 3 | 1 | 1 | 7 |
| 11 | ಕೊಡಗು | 1 | 1 | - | - | 2 |
| 12 | ಚಾಮರಾಜನಗರ | 2 | 1 | 2 | - | 5 |
| 13 | ಚಿಕ್ಕಮಗಳೂರು | 1 | 2 | 2 | - | 5 |
| 14 | ಹಾಸನ | 4 | 3 | 2 | - | 9 |
| 15 | ಮಂಗಳೂರು | 6 | 3 | 1 | - | 10 |
| 16 | ಉಡುಪಿ | 2 | 2 | 1 | - | 5 |
| 17 | ಧಾರವಾಡ | 8 | 5 | 6 | 2 | 21 |
| 18 | ಬೆಳಗಾವಿ | 6 | 4 | 6 | - | 16 |
| 19 | ಕಾರವಾರ | 3 | 2 | 2 | 1 | 8 |
| 20 | ವಿಜಯಪುರ | 2 | 2 | 2 | 1 | 7 |
| 21 | ಬಾಗಲಕೋಟೆ | 6 | 4 | 2 | 2 | 14 |
| 22 | ಗದಗ-ಬೆಟಗೇರಿ | 2 | - | 2 | - | 4 |
| 23 | ಹಾವೇರಿ | 3 | - | 1 | - | 4 |
| 24 | ಕಲಬುರಗಿ | 8 | 5 | 7 | 3 | 23 |
| 25 | ಬೀದರ್ | 2 | 2 | 2 | - | 6 |
| 26 | ಯಾದಗಿರಿ | 2 | 1 | 1 | 1 | 5 |
| 27 | ರಾಯಚೂರು | 4 | 1 | 2 | 1 | 8 |
| 28 | ಬಳ್ಳಾರಿ | 2 | 1 | 2 | 1 | 6 |
| 29 | ಕೊಪ್ಪಳ | 3 | 1 | 3 | 2 | 9 |
| 30 | ರಾಮನಗರ | 1 | - | - | - | 1 |
| 31 | ವಿಜಯನಗರ | - | - | - | - | - |
| | **ಒಟ್ಟು** | **198** | **107** | **81** | **24** | **410** |

Thippeswamy NK 12/2/2024

ನಗರ ಮತ್ತು ಗ್ರಾಮಾಂತರ ಯೋಜನಾ ನಿರ್ದೇಶಕರು

## ಅನುಬಂಧ - 2

## ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆಯಲ್ಲಿ ಜಿಲ್ಲಾವಾರು ಹೊರಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳ ವಿವರ

| ಕ್ರ.ಸಂ | ಕಚೇರಿಗಳ ಹೆಸರು | ಬೆರಳಚ್ಚುಗಾರರು | ವಾಹನ ಚಾಲಕರು | ಗ್ರೂಪ್ - ಡಿ |
|---|---|---|---|---|
| 1 | ಆಯುಕ್ತಾಲಯ, ಬೆಂಗಳೂರು | - | 1 | 1 |
| 2 | ನಿರ್ದೇಶಕರ ಕಚೇರಿ, ಬೆಂಗಳೂರು | 6 | 2 | 4 |
| 3 | ಜಂಟಿ ನಿರ್ದೇಶಕರು, ಬೆಂಗಳೂರು | 1 | - | 1 |
| 4 | ಸಹಾಯಕ ನಿರ್ದೇಶಕರು, ದಾವಣಗೆರೆ | 1 | - | 1 |
| 5 | ಸಹಾಯಕ ನಿರ್ದೇಶಕರು, ಚಿತ್ರದುರ್ಗ | 0 | - | 1 |
| 6 | ಸಹಾಯಕ ನಿರ್ದೇಶಕರು,ಕೋಲಾರ | 1 | - | 1 |
| 7 | ಸಹಾಯಕ ನಿರ್ದೇಶಕರು, ಶಿವಮೊಗ್ಗ | 1 | - | 1 |
| 8 | ಸಹಾಯಕ ನಿರ್ದೇಶಕರು, ತುಮಕೂರು | 1 | - | 1 |
| 9 | ಸಹಾಯಕ ನಿರ್ದೇಶಕರು, ಚಿಕ್ಕಬಳ್ಳಾಪುರ | 1 | - | 0 |
| 10 | ಜಂಟಿ ನಿರ್ದೇಶಕರು, ಮೈಸೂರು | 1 | 1 | 1 |
| 11 | ಸಹಾಯಕ ನಿರ್ದೇಶಕರು, ಮೈಸೂರು | 1 | - | 1 |
| 12 | ಸಹಾಯಕ ನಿರ್ದೇಶಕರು, ಉಡುಪಿ | 1 | - | 1 |
| 13 | ಸಹಾಯಕ ನಿರ್ದೇಶಕರು, ಮಂಗಳೂರು | 1 | - | 0 |
| 14 | ಸಹಾಯಕ ನಿರ್ದೇಶಕರು, ಮಡಿಕೇರಿ | 1 | 1 | 1 |
| 15 | ಸಹಾಯಕ ನಿರ್ದೇಶಕರು, ಚಾಮರಾಜನಗರ | 1 | - | 1 |
| 16 | ಸಹಾಯಕ ನಿರ್ದೇಶಕರು, ಮಂಡ್ಯ | 1 | - | 1 |
| 17 | ಸಹಾಯಕ ನಿರ್ದೇಶಕರು, ಹಾಸನ | 1 | - | 1 |
| 18 | ಸಹಾಯಕ ನಿರ್ದೇಶಕರು, ಚಿಕ್ಕಮಗಳೂರು | 1 | - | 1 |
| 19 | ಅಪರ ನಿರ್ದೇಶಕರು, ಧಾರವಾಡ | 1 | 1 | 1 |
| 20 | ಸಹಾಯಕ ನಿರ್ದೇಶಕರು, ಧಾರವಾಡ | 1 | - | 0 |
| 21 | ಸಹಾಯಕ ನಿರ್ದೇಶಕರು, ಗದಗ | 1 | - | 1 |
| 22 | ಸಹಾಯಕ ನಿರ್ದೇಶಕರು, ವಿಜಯಪುರ | 1 | - | 0 |
| 23 | ಸಹಾಯಕ ನಿರ್ದೇಶಕರು, ಬೆಳಗಾವಿ | 1 | - | 1 |
| 24 | ಸಹಾಯಕ ನಿರ್ದೇಶಕರು, ಶಿರಸಿ | 1 | - | 1 |
| 25 | ಸಹಾಯಕ ನಿರ್ದೇಶಕರು, ಹಾವೇರಿ | 1 | - | 1 |
| 26 | ಸಹಾಯಕ ನಿರ್ದೇಶಕರು, ಕಾರವಾರ | 1 | - | 0 |
| 27 | ಜಂಟಿ ನಿರ್ದೇಶಕರು, ಕಲಬುರಗಿ | 1 | - | 0 |
| 28 | ಸಹಾಯಕ ನಿರ್ದೇಶಕರು, ಕಲಬುರಗಿ | 1 | - | 1 |
| 29 | ಸಹಾಯಕ ನಿರ್ದೇಶಕರು, ಬಳ್ಳಾರಿ | 1 | - | 0 |
| 30 | ಸಹಾಯಕ ನಿರ್ದೇಶಕರು, ಬೀದರ್ | 1 | - | 1 |
| 31 | ಸಹಾಯಕ ನಿರ್ದೇಶಕರು, ಕೊಪ್ಪಳ | 1 | - | 1 |
| 32 | ಸಹಾಯಕ ನಿರ್ದೇಶಕರು ಯಾದಗಿರಿ | 0 | - | 1 |
| 33 | ಸಹಾಯಕ ನಿರ್ದೇಶಕರು ರಾಯಚೂರು | 1 | - | 0 |
| | **ಒಟ್ಟು** | **35** | **6** | **28** |

Thippeswamy 12/2/2024
ನಗರ ಮತ್ತು ಗ್ರಾಮಾಂತರ ಯೋಜನಾ
ನಿರ್ದೇಶಕರು